ಧಾರ್ಮಿಕ ಸೌಹಾರ್ದ

ಪ್ರಕಾಶಕರ ಮಾತು

ಲೋಕಾರಂಭದಲ್ಲಿ ಮಾನವರು ಒಂದೇ ಸಮುದಾಯದವರಾಗಿದ್ದರು. ಅವರೆಲ್ಲರ ಧರ್ಮ ಒಂದೇ ಆಗಿತ್ತು. ಎಲ್ಲರೂ ಒಂದೇ ತಂದೆ - ತಾಯಿಯ ಸಂತಾನ. ಆದ್ದರಿಂದ ಮಾನವರೆಲ್ಲರೂ ಪರಸ್ಪರ ಸಹೋದರರು ಮತ್ತು ಸಮಾನರಾಗಿದ್ದಾರೆ. ಆದರೆ ಕಾಲ ಕ್ರಮೇಣ ಅವರೊಳಗೆ ಭಿನ್ನಮತಗಳುಂಟಾಗಿ ವಿವಿಧ ಜೀವನ ವಿಧಾನಗಳನ್ನು ಮಾಡಿಕೊಂಡರು. ಹೀಗೆ ಅನೇಕ ಮತಧರ್ಮಗಳು, ವಿಭಿನ್ನ ಸಂಸ್ಕೃತಿಗಳು ಹುಟ್ಟಿಕೊಂಡವು.

ಇಸ್ಲಾಮ್ ಧರ್ಮವು ಮಾನವರೆಲ್ಲರನ್ನೂ ಸಮಾನರೆಂದು ಪರಿಗಣಿಸುತ್ತದೆ. ಮಾನವರ ಮಧ್ಯೆ ವರ್ಣ, ವರ್ಗ, ಮೇಲು ಕೀಳು ಎಂಬ ತಾರತಮ್ಯವಿರಿಸುವುದಿಲ್ಲ. ಅದೇ ರೀತಿ ತನ್ನ ವಿಚಾರವನ್ನು ಯಾರ ಮೇಲೂ ಬಲವಂತವಾಗಿ ಹೇರುವುದಿಲ್ಲ. 'ಧರ್ಮದಲ್ಲಿ ಬಲಾತ್ಕಾರವಿಲ್ಲ' ಮತ್ತು 'ನಿಮ್ಮ ಧರ್ಮ ನಿಮಗೆ, ನನ್ನ ಧರ್ಮ ನನಗೆ' ಎಂದು ಸಾರಿ ಎಲ್ಲ ಮತ ಧರ್ಮದವರಿಗೂ ತಂತಮ್ಮ ಜೀವನ ಸಿದ್ಧಾಂತದಂತೆ ಬದುಕುವ ಹಕ್ಕನ್ನು ಮಾನ್ಯ ಮಾಡುತ್ತದೆ.

ಮತ ಧರ್ಮಗಳ ಭಿನ್ನತೆಯು ಮಾನವರು ಸಹಬಾಳ್ವೆ ನಡೆಸುವುದಕ್ಕೆ ಎಂದೂ ಅಡ್ಡಿಯಾಗಿಲ್ಲ. ಪರಸ್ಪರ ಪ್ರೀತಿ - ಸೌಹಾರ್ದತೆ ತೋರಿ ಬಾಳುವುದರಿಂದ ಮತ್ತು ಪರಸ್ಪರರ ಧರ್ಮಗಳನ್ನು ಗೌರವಿಸುವುದರಿಂದ ಭೂಮುಖದ ಮೇಲೆ ಶಾಂತಿ ಸಮಾಧಾನ ನೆಲೆಸುತ್ತದೆ. ಈ ವಿಷಯಗಳನ್ನು ಪರಿಗಣಿಸದೆ ಸ್ವಾರ್ಥ ಹಿತಾಸಕ್ತಿಗಳಿಗಾಗಿ ಕೆಲವರು ಜನರ ಮಧ್ಯೆ ದ್ವೇಷ, ಅಸೂಯೆ, ಜನಾಂಗ ಮೇಲ್ಮೆ ಇತ್ಯಾದಿಗಳನ್ನು ಬೆಳೆಸಿ ಪರಸ್ಪರ ಕಚ್ಚಾಡಿಸುತ್ತಾರೆ. ಇದರಿಂದ ಮನಸ್ಸುಗಳು ಒಡೆಯುತ್ತದೆ. ಅಶಾಂತಿ, ಗಲಭೆ, ಕ್ಷೋಭೆಗಳಿಗೆ ಅದು ಕಾರಣವಾಗುತ್ತದೆ. ಇದನ್ನು ನೈಜ ಧರ್ಮ ವಿಶ್ವಾಸಿಗಳು ನಿರ್ಮೂಲನ ಮಾಡಬಹುದು. ಅದಕ್ಕಾಗಿ ಅಂತಹವರೆಲ್ಲರೂ ಒಟ್ಟಾಗಿ ಈ ಕೆಡುಕಿನ ವಿರುದ್ಧ ಹೋರಾಡಬೇಕಾಗಿದೆ.

'ಧಾರ್ಮಿಕ ಸೌಹಾರ್ದ' ಎಂಬ ಈ ಕಿರು ಹೊತ್ತಿಗೆ ಪರಸ್ಪರ ಸೌಹಾರ್ದದಿಂದ ಬಾಳುವ ಸೂತ್ರಗಳನ್ನು ಕಲಿಸಿಕೊಡುತ್ತದೆ. ಇದರ ಅಧ್ಯಯನವು ಅದಕ್ಕೆ ಪ್ರೇರಣೆ ನೀಡಲೆಂದು ಹಾರೈಸುತ್ತೇವೆ.

— ಶಾಂತಿ ಪ್ರಕಾಶನ

ಅನುಕ್ರಮಣಿಕೆ

ಮಾನವ

ಮಾನವನು ಈ ಪ್ರಪಂಚಕ್ಕೆ ಮಹಾ ಕೊಡುಗೆಯಾಗಿದ್ದಾನೆ. ಆದರೆ ಆತನು ತನ್ನ ಸ್ಥಾನಮಾನವನ್ನು ಸರಿಯಾಗಿ ಅರಿತಿಲ್ಲ. ತನ್ನ ಅಂತಿಮ ಪರಿಣಾಮದ ಬಗ್ಗೆ ಆತನು ನಿಶ್ಚಿಂತನಾಗಿದ್ದಾನೆ. ಮಾನವನು ತನ್ನ ವಾಸ್ತವಿಕತೆಯನ್ನು ಅರಿತರೆ ಪುನಃ ಯಶಸ್ಸಿನ ಹಾದಿಯಲ್ಲಿ ಸಾಗಬಲ್ಲನು. ಮಾನವಕುಲದ ಸುಧಾರಣೆಯಾಗಬಹುದು. ಪಕ್ಷಪಾತ, ದ್ವೇಷ, ಹಗೆತನ ಮತ್ತು ಅಲ್ಪತನವನ್ನು ತೊರೆದರೆ ಆತ ವಾಸ್ತವದಲ್ಲಿ ನೈಜ ಮಾನವನಾಗ ಹೊರಟಿದ್ದಾನೆಂದು ಗ್ರಹಿಸಬಹುದು. ತನ್ನ ಬದುಕಿನಲ್ಲಿ ಮಾನವೀಯತೆ, ಅನುಕಂಪ, ಪರಹಿತ ಚಿಂತನೆ, ಔದಾರ್ಯ ಮತ್ತು ಮನೋವೈಶಾಲ್ಯದ ಗುಣಗಳನ್ನು ಪ್ರದರ್ಶಿಸಲಾರಂಭಿಸಿದರೆ ಅದುವೇ ತನ್ನ ಯಶಸ್ಸಿನ ಮರ್ಮವೆಂದು ಆತನಿಗೆ ಮನವರಿಕೆಯಾಗಬಹುದು.

ಈ ಜಗತ್ತಿನಲ್ಲಿ ಕನಿಕರ ತೋರುವುದು ಮತ್ತು ಸಮಾಜಸೇವೆ ಮಾಡುವುದು ಮಾನವರ ಕಡ್ಡಾಯ ಕರ್ತವ್ಯವಾಗಿದೆ. ಜನರೊಂದಿಗೆ ಉತ್ತಮ ಮಾತು ಮತ್ತು ವರ್ತನೆಗಳಿಂದ ವ್ಯವಹರಿಸಬೇಕು. ಈ ಗುಣಗಳಿಲ್ಲದ ವ್ಯಕ್ತಿಗಳ ಹೃದಯವು ಕೆಡುಕುಗಳ ತಾಣವಾಗಿರುತ್ತದೆ. ಆತನು ದ್ವೇಷ ಮತ್ತು ಹಗೆತನದ ಅಡ್ಡಗೋಡೆಯನ್ನು ಕಟ್ಟುತ್ತಾನೆ. ರಕ್ತದ ಕೋಡಿ ಹರಿಸುತ್ತಾನೆ. ಅದರಿಂದಾಗಿ ಮಾನವರು ಪೀಡಿತರು ಮತ್ತು ಸಂತ್ರಸ್ತರಾಗುತ್ತಾರೆ. ಮನೆ ಕಟ್ಟಡಗಳು, ಆರಾಧನಾಲಯಗಳು ಮತ್ತು ಆಸ್ಪತ್ರೆಗಳು ನಾಶವಾಗುತ್ತವೆ. ಮಹಿಳೆಯರು ವಿಧವೆಯರಾಗುತ್ತಾರೆ. ಮಕ್ಕಳು ಅನಾಥರಾಗುತ್ತಾರೆ. ಗಲಭೆ ಹುಟ್ಟಿಸುವವರು ಮತ್ತು ಜನರನ್ನು ನೆಮ್ಮದಿಯಿಂದ ಬದುಕಲು ಬಿಡದವರು ವಾಸ್ತವದಲ್ಲಿ ಸ್ವಾರ್ಥಿಗಳಾಗಿರುತ್ತಾರೆ.

ಮಾನವರ ಮಧ್ಯೆ ಸೌಹಾರ್ದ ಸಂಬಂಧ, ನಿಸ್ಪೃಹ ಸಹೋದರತೆ ಮತ್ತು ಪರಸ್ಪರ ಹಿತಚಿಂತನೆಯಿರಬೇಕು. ಪ್ರತಿಯೊಂದು ಧರ್ಮವು ಮಾನವರು ಯಾವ ರೀತಿ ವರ್ತಿಸಬೇಕೆಂದು ಕಲಿಸುತ್ತದೆ. ಮೂಲಭೂತವಾಗಿ ನಾವೆಲ್ಲ ಒಂದೇ ತಂದೆ - ತಾಯಿಯ ಮಕ್ಕಳು, ನಮ್ಮದು ಸಹೋದರ ಸಂಬಂಧವಾಗಿದೆ. ಆದ್ದರಿಂದ ಪರಸ್ಪರ ಒಬ್ಬರು ಇನ್ನೊಬ್ಬರೊಂದಿಗೆ ಉತ್ತಮವಾಗಿ ವರ್ತಿಸುವುದು ಕಡ್ಡಾಯ. ಪರಸ್ಪರರ ಹಕ್ಕುಗಳಿಗೆ ಚ್ಯುತಿಯುಂಟಾಗಬಾರದು. ಈ ಸಂಬಂಧದ ಆಧಾರದಲ್ಲಿ ನೆರೆಹೊರೆಯವರು, ಅಪರಿಚಿತರು, ಗೆಳೆಯರು, ಪ್ರಯಾಣಿಕರು, ವ್ಯಾಪಾರಿಗಳು ಮತ್ತು ವಿವಿಧ ರಂಗಗಳಲ್ಲಿ ಕೆಲಸ ಮಾಡುವವರೊಂದಿಗೆ ಸದ್ವರ್ತನೆ ಮತ್ತು ಉತ್ತಮ ವ್ಯವಹಾರವೇ ಮಾನವೀಯತೆಯಾಗಿದೆ.

ವಿವಿಧ ಕಾರಣಗಳಿಂದಾಗಿ ಎಲ್ಲ ಮಾನವರೂ ಒಂದೇ ದೃಷ್ಟಿಕೋನವನ್ನು ಹೊಂದಿರಲು ಸಾಧ್ಯವಿಲ್ಲ. ವ್ಯಕ್ತಿ ಮತ್ತು ಜನಾಂಗಗಳ ಸ್ವಭಾವಗಳಲ್ಲಿರುವ ವೈವಿಧ್ಯತೆಯನ್ನು ಗಮನಿಸಿ ಎಲ್ಲರ ಭಾವನೆಗಳನ್ನು ವಿಶಾಲ ಮನಸ್ಸಿನಿಂದ ಗೌರವಿಸಬೇಕು. ವಿಶ್ವಾಸ, ನಂಬಿಕೆಗಳ ವಿಷಯವೂ ಅಷ್ಟೇ. ಇದು ನಮ್ಮ ನೈತಿಕ ಕರ್ತವ್ಯವಾಗಿದೆ. ವಿಶ್ವಾಸದ ವೈವಿಧ್ಯತೆಯ ಆಧಾರದಲ್ಲಿ ಮಾನವರು ಪರಸ್ಪರ ವೈರ ವಿದ್ವೇಷ, ಪಕ್ಷಪಾತ ವಿರಿಸಿಕೊಳ್ಳುವುದನ್ನು ಯಾವ ಧರ್ಮವೂ ಮೆಚ್ಚುವುದಿಲ್ಲ.

ದೇವಾನುಗ್ರಹಗಳು ಎಲ್ಲ ಮಾನವರ ಮೇಲೆಯೂ ಸಮಾನವಾಗಿ ವರ್ಷಿಸುತ್ತದೆ. ಇದರಲ್ಲಿ ಹಿಂದೂ, ಮುಸ್ಲಿಮ್, ಕ್ರೈಸ್ತರೆಂಬ ಭೇದವಿಲ್ಲ. ಅವನು ಪ್ರತಿಯೊಂದು ಜೀವಿಗೂ ಅದರ ಅವಶ್ಯಕ ವಸ್ತುಗಳನ್ನು ದಯಪಾಲಿಸುತ್ತಿದ್ದಾನೆ. ಹೀಗಿರುತ್ತಾ ನಮ್ಮ ವಿಶ್ವಾಸ-ನಂಬಿಕೆಗಳಿಗಿಂತ ಭಿನ್ನವಾಗಿರುವ ವ್ಯಕ್ತಿ ಮತ್ತು ಸಮಾಜವನ್ನು ದ್ವೇಷಿಸಿ ಅವರ ಮೇಲೆ ಹಿಂಸೆ-ದೌರ್ಜನ್ಯವೆಸಗುವುದು ಹೇಗೆ ತಾನೇ ಸರಿಯಾದೀತು?

ಮಾನವರು ಕೂಡಿ ಬಾಳುವುದರಿಂದಲೇ ಸಾಮೂಹಿಕ ಜೀವನ ಅಸ್ತಿತ್ವಕ್ಕೆ ಬರುತ್ತದೆ. ಸಂಬಂಧಗಳು ಸುದೃಢವಾಗುತ್ತವೆ. ಪ್ರೀತಿ ವಿಶ್ವಾಸಗಳು ಜೀವನದಲ್ಲಿ ಪ್ರತಿಬಿಂಬಿತವಾಗುತ್ತವೆ. ನ್ಯಾಯ-ನೀತಿ, ಔದಾರ್ಯದಿಂದ ಜನರಲ್ಲಿ ಮಾನವೀಯತೆ ಬೆಳೆಯುತ್ತದೆ. ಮಾನವನ ಪ್ರಗತಿಯು ಅದನ್ನೇ ಅವಲಂಬಿಸುತ್ತದೆ. ಅವನು ಉನ್ನತೋನ್ನತ ಯಶಸ್ಸಿಗೆ ತಲಪುತ್ತಾನೆ.

ನಮ್ಮ ದೇಶ

110 ಕೋಟಿ ಜನಸಂಖ್ಯೆಯಿರುವ ನಮ್ಮ ಈ ಭಾರತವು ಫಲ ಸಮೃದ್ಧವಾಗಿದೆ. ಬೆಟ್ಟ ಕಣಿವೆಗಳು ಇದರ ಸೌಂದರ್ಯವನ್ನು ಇಮ್ಮಡಿಗೊಳಿಸಿವೆ. ಹವಾಮಾನದ ಬದಲಾವಣೆಗಳಿಂದ ಅದರ ಬೆಳೆಗಳು ಕಂಗೊಳಿಸುತ್ತವೆ. ಅದರ ನದಿಗಳು ಲಕ್ಷಾವಧಿ ಎಕ್ರೆ ಜಮೀನನ್ನು ಹಸಿರುಗೊಳಿಸುತ್ತಾ ಸಮುದ್ರವನ್ನು ಸೇರುತ್ತಿವೆ. ಇಲ್ಲಿ ರೈತನು ಸೂರ್ಯೋದಯಕ್ಕಿಂತ ಮುಂಚೆಯೇ ಹೊಲದತ್ತ ಸಾಗುತ್ತಾನೆ. ಉದ್ಯಮಿಗಳು ತಮ್ಮ ವ್ಯಾಪಾರ ವಹಿವಾಟುಗಳ ಅಭಿವೃದ್ಧಿಯಲ್ಲಿ ನಿರತರಾಗಿದ್ದಾರೆ. ಸಣ್ಣದೊಡ್ಡ ಉದ್ಯಮಿಗಳು, ಕಾರ್ಖಾನೆಗಳು ಪ್ರಗತಿಪಥದಲ್ಲಿ ಸಾಗುತ್ತಿವೆ. ಕೋಟಿಗಟ್ಟಲೆ ವಿದ್ಯಾರ್ಥಿ- ವಿದ್ಯಾರ್ಥಿನಿಯರು ಶಿಕ್ಷಣಾಲಯಗಳ ದಾರಿ ಹಿಡಿದಿದ್ದಾರೆ. ವಿವಿಧ ಧರ್ಮಗಳ ಅನುಯಾಯಿಗಳು ತಮ್ಮ ಸೃಷ್ಟಿಕರ್ತನ ಆರಾಧನೆ, ಕೀರ್ತನೆ ಉಪಾಸನೆಗಳಲ್ಲಿ ತಲ್ಲೀನರಾಗಿದ್ದಾರೆ.

ಭಾರತವು ವಿವಿಧ ಧರ್ಮ ಮತ್ತು ಸಂಸ್ಕೃತಿಗಳ ನೆಲೆ ವೀಡಾಗಿವೆ. ಇಲ್ಲಿ ವಿವಿಧ ಧರ್ಮೀಯರು ಒಟ್ಟೊಟ್ಟಿಗೆ ಜೀವಿಸುತ್ತಿದ್ದಾರೆ. ಪರಸ್ಪರ ನಿಕಟರಾಗಿದ್ದಾರೆ. ಹಿಂದೆ ಧರ್ಮಾನುಯಾಯಿಗಳು ಪ್ರೀತಿ - ಸೌಹಾರ್ದದಿಂದ ಬಾಳುತ್ತಿದ್ದರು. ಹಿಂದೂ-ಮುಸ್ಲಿಮ್ ಕೇರಿಗಳಲ್ಲಿ ಪ್ರೀತಿಯ ಹೊನಲು ಹರಿಯುತ್ತಿತ್ತು. ಆದರೆ ಕ್ರಮೇಣ ವಿವಿಧ ಕಾರಣಗಳಿಂದಾಗಿ ಸಮಾಜದಲ್ಲಿ ಪಕ್ಷಪಾತ, ಸಂಕುಚಿತ ಮನೋಭಾವ ಬೆಳೆಯುತ್ತಾ ಹೋಯಿತು. ಕೆಲವು ಬಾಹ್ಯಶಕ್ತಿಗಳು ತಮ್ಮ ಸ್ವಾರ್ಥಕ್ಕಾಗಿ ವಿವಿಧ ಧರ್ಮೀಯರನ್ನು ಹೊಡೆದಾಡಿಸಲು ಪ್ರಯತ್ನಿಸಿದವು. ಪರಸ್ಪರ ತಪ್ಪು ತಿಳುವಳಿಕೆ ಗಳನ್ನು ವ್ಯಾಪಕಗೊಳಿಸುವ ಸಾಹಿತ್ಯಗಳನ್ನು ಬರೆಯಲಾಯಿತು.

ನಮ್ಮ ದೇಶ ಸ್ವತಂತ್ರವಾದ ಬಳಿಕ ಹೊಸ ಭಾರತದ ನಿರ್ಮಾಣವೇ ನಮ್ಮ ಮುಂದಿನ ಬಹುದೊಡ್ಡ ಸಮಸ್ಯೆಯಾಗಿತ್ತು. ವಿವಿಧ ಮತ-ಧರ್ಮಗಳ ಅನುಯಾಯಿ ಗಳಲ್ಲಿ ಪರಸ್ಪರ ನಂಬಿಕೆಯನ್ನು ಸುದೃಢಗೊಳಿಸಬೇಕಾಗಿತ್ತು. ಆದರೆ ವಿವಿಧ ಗುಂಪು ಗಳಾಗಿ ವಿಭಜಿಸಲ್ಪಟ್ಟು ಆ ವಾತಾವರಣವನ್ನು ಕೆಲವರು ತಮ್ಮ ದುರ್ಲಾಭಕ್ಕಾಗಿ ಬಳಸಿದರು. ಅದಕ್ಕಾಗಿ ಅವರು ಕೋಮುವಾದಕ್ಕೆ ಪ್ರೋತ್ಸಾಹ ನೀಡಿದರು. ಇದರಿಂದಾಗಿ ಒಂದೆಡೆಯಲ್ಲಿ ನೈತಿಕ ಮೌಲ್ಯಗಳಿಗೆ ಹಾನಿಯಾಯಿತು. ಅವುಗಳನ್ನು

ಗೌರವಿಸುವ ಶಕ್ತಿಗಳನ್ನು ದುರ್ಬಲಗೊಳಿಸಲಾಯಿತು. ಇನ್ನೊಂದೆಡೆಯಲ್ಲಿ ಕೋಮು ವಾದಿಗಳು ಮತ್ತು ಭ್ರಷ್ಟಾಚಾರಿಗಳು ಪರಸ್ಪರ ಕೈಜೋಡಿಸಿದರು. ಧಾರ್ಮಿಕ ಶಿಕ್ಷಣಗಳನ್ನು ಕಡೆಗಣಿಸಿ ಮಾನವರ ಮಧ್ಯೆ ಸಂಘರ್ಷದ ಬೀಜವನ್ನು ಬಿತ್ತಲಾಯಿತು. ಇದರಿಂದಾಗಿ ಸಾರ್ವಜನಿಕ ಜೀವನದಿಂದ ನೈತಿಕ ಮೌಲ್ಯಗಳು ಮಾಯವಾದುವು. ಜಾತ್ಯತೀತತೆಯ ತಪ್ಪು ವ್ಯಾಖ್ಯಾನವು ಧರ್ಮ ಮತ್ತು ಜೀವನವನ್ನು ಬೇರ್ಪಡಿಸಿತು. ಆದರೆ ಅಪರಾಧಿ ಶಕ್ತಿಗಳಿಗೆ ತಮ್ಮ ಆಟವಾಡುವ ಮುಕ್ತ ಅವಕಾಶ ದೊರೆಯಿತು.

ಸ್ವಾತಂತ್ರ್ಯದ ಬಳಿಕ ಕಂಡ ಪ್ರಗತಿ, ಸುಭಿಕ್ಷೆ ಮತ್ತು ಉತ್ತಮ ಭವಿಷ್ಯದ ಕನಸು ಸಾಕ್ಷಾತ್ಕಾರಗೊಂಡಿಲ್ಲ. ವಿಜ್ಞಾನ-ತಂತ್ರಜ್ಞಾನ ರಂಗಗಳಲ್ಲಿ ನಾವು ಅದ್ಭುತ ಪ್ರಗತಿಯನ್ನು ಸಾಗಿಸಿದ್ದೇವೆ. ಆದರೆ ನೈತಿಕವಾಗಿ ದೇಶವು ಪಾತಾಳಕ್ಕೆ ಸಾಗುತ್ತಿದೆ. ಪ್ರಾದೇಶಿಕತೆ, ಜಾತೀಯತೆ, ಭ್ರಷ್ಟಾಚಾರ, ಶೋಷಣೆ, ನಗ್ನತೆ, ಮದ್ಯಪಾನ, ಜೂಜಾಟ, ಮೈಗಳ್ಳತನ, ಮಾನವ ಹಕ್ಕುಗಳ ಉಲ್ಲಂಘನೆ, ಹಿಂಸೆ, ಗಲಭೆ, ಬಂಡಾಯ, ಕೊಲೆ, ದರೋಡೆಯಂತಹ ಅಪರಾಧಗಳು ದಿನೇದಿನೇ ಹೆಚ್ಚುತ್ತಾ ಜೀವನದ ಎಲ್ಲ ರಂಗಗಳಲ್ಲಿಯೂ ವ್ಯಾಪಿಸಿದೆ.

ಧರ್ಮಗಳು

ನಾವು ಪ್ರಾಮಾಣಿಕವಾಗಿ ಧರ್ಮಗಳ ಅಧ್ಯಯನ ನಡೆಸಿದರೆ, ಮಾನವ ಜೀವನಕ್ಕೆ ಸಂಬಂಧಿಸಿದ ಮೂಲಭೂತ ಮೌಲ್ಯಗಳಲ್ಲಿ ಅವು ಸಮಾನ ಅಂಶಗಳನ್ನು ಹೊಂದಿವೆಯೆಂದು ವ್ಯಕ್ತವಾಗುತ್ತದೆ. ಉದಾ: 1. ಸತ್ಯಸಂಧತೆ, ನ್ಯಾಯನೀತಿ, ವಚನ ಪಾಲನೆ. 2. ಕರುಣೆ, ಅನುಕಂಪ, ಔದಾರ್ಯ. 3. ಮನೋವೈಶಾಲ್ಯ, ಸಹನೆ, ಆತ್ಮ ನಿಯಂತ್ರಣ. 4. ಕರ್ತವ್ಯ ಪ್ರಜ್ಞೆ, ಅವಿರತ ಶ್ರಮ. 5. ಹೆತ್ತವರು, ಸಂಬಂಧಿಕರು ಮತ್ತು ನೆರೆಹೊರೆಯವರು ಹಾಗೂ ದುರ್ಬಲರೊಂದಿಗೆ ಉತ್ತಮ ವರ್ತನೆ.

ನಮ್ಮ ಜೀವನವನ್ನು ಅಪರಾಧಗಳಿಂದ ಮುಕ್ತಗೊಳಿಸಬೇಕೆಂಬ ಶಿಕ್ಷಣವೂ ಧರ್ಮಗಳಿಂದ ದೊರೆಯುತ್ತದೆ. ಉದಾ: 1. ಸುಳ್ಳು, ವಂಚನೆ, ವಚನಭಂಗ. 2. ಸ್ವಾರ್ಥ, ಕಠೋರ ಮನಸ್ಸು, ಸಂಕುಚಿತ ಮನೋಭಾವ. 3. ಒಡಕು, ಭಿನ್ನತೆ, ಅನ್ಯಾಯ, ಕ್ಷೋಭೆ. 4. ಕಳ್ಳತನ, ಮೋಸ, ಲಂಚ, ದರೋಡೆ, ಕೊಲೆ, ಭ್ರಷ್ಟಾಚಾರ, ಶೋಷಣೆ. 5. ಗಲಭೆ, ಮಾನಹರಣ, ಕೊಳ್ಳೆ ಇತ್ಯಾದಿ.

ಸತ್ಯಸಂಧ, ಸಚ್ಚರಿತ ಮತ್ತು ಮೃದು ಸ್ವಭಾವದ ಸಜ್ಜನರನ್ನು ಎಲ್ಲ ಧರ್ಮಗಳೂ ಇಷ್ಟಪಡುತ್ತವೆ. ವ್ಯಕ್ತಿ ಮತ್ತು ಸಮಾಜದ ಈ ಸಾಮಾನ್ಯ ಮೌಲ್ಯಗಳು ಯಾವುದೇ ಒಂದು ಧರ್ಮಕ್ಕೆ ಸೀಮಿತವಾಗಿಲ್ಲ. ಈ ಕುರಿತು ಎಲ್ಲ ಧರ್ಮಗಳೂ ವಿಶಾಲ ದೃಷ್ಟಿಕೋನವನ್ನು ಹೊಂದಿವೆ. ಈ ಮೌಲ್ಯಗಳ ವಿಷಯದಲ್ಲಿ ಯಾವ ಧರ್ಮವೂ ತನ್ನವರು ಮತ್ತು ಇತರರು ಎಂಬ ಭೇದಭಾವವಿರಿಸುವುದಿಲ್ಲ. ನಿಮ್ಮ ಧರ್ಮದವರೊಂದಿಗೆ ಪ್ರೀತಿ, ಅನುಕಂಪ, ನ್ಯಾಯ ತೋರಿರಿ, ಇತರರೊಂದಿಗೆ ಅನ್ಯಾಯ, ಅಕ್ರಮ, ನಿಷ್ಕರುಣೆ ಮತ್ತು ಹಗೆತನದೊಂದಿಗೆ ವರ್ತಿಸಿರಿ ಎಂದು ಯಾವ ಧರ್ಮವೂ ಕಲಿಸುವುದಿಲ್ಲ. ನಿಮ್ಮ ಪಕ್ಷದವರ ಜೀವ, ಸೊತ್ತು ಮತ್ತು ಮಾನ ರಕ್ಷಿಸಿರಿ. ಇತರರ ಸೊತ್ತುಗಳನ್ನು ಕೊಳ್ಳೆ ಹೊಡೆಯಿರಿ. ಅವರ ಆಸ್ತಿಪಾಸ್ತಿಗಳಿಗೆ ಹಾನಿ ಮಾಡಿರಿ. ಅವರ ಮನೆಗಳಿಗೆ ಕಿಚ್ಚಿಡಿರಿ. ಅವರ ಯುವಕರು ಮತ್ತು ಮಕ್ಕಳನ್ನು ಕೊಲ್ಲಿರಿ. ಅವರ ಸ್ತ್ರೀಯರ ಮಾನಹರಣ ಮಾಡಿರಿ ಎಂದೂ ಅವು ಹೇಳುವುದಿಲ್ಲ. ಬದಲಾಗಿ ಧರ್ಮಗಳ ನಂಬಿಕೆಯ ಪ್ರಕಾರ, ಸಮಾನ ಮಾನವೀಯ ಮೌಲ್ಯಗಳಲ್ಲಿರುವ ಒಳಿತುಗಳು ಮಾನವನ ಶ್ರೇಷ್ಠತೆಯ ಮಾನದಂಡವಾಗಿದೆ. ಅವುಗಳಲ್ಲಿರುವ ಕೆಡುಕುಗಳು ಮಾನವ ನೀಚತೆಯ ಪ್ರತೀಕವಾಗಿದೆ. ಮಾನವನು ಈ ಒಳ್ಳೆಯ ಕಾರ್ಯಗಳನ್ನು ಮಾಡಿ ಶ್ರೇಷ್ಠನೆನಿಸಿಕೊಳ್ಳುತ್ತಾನೆ. ಕೆಟ್ಟಕಾರ್ಯಗಳನ್ನು ಮಾಡುತ್ತಾ ನೀಚನಾಗುತ್ತಾನೆ. ಮುಕ್ತಿ ಮತ್ತು ಮೋಕ್ಷದ ಕಲ್ಪನೆಯು ಎಲ್ಲ ಧರ್ಮಗಳಲ್ಲಿಯೂ ಇದೆ. ಅದಕ್ಕೆ ನಿಬಂಧನೆಗಳನ್ನೂ ಇರಿಸಲಾಗಿದೆ. ಕೆಡುಕುಗಳಿಂದ ದೂರವಿರುವುದು ಮತ್ತು ಮೇಲೆ ಸೂಚಿಸಲಾಗಿರುವ ಒಳಿತುಗಳನ್ನು ಮಾಡುವುದು ಎಲ್ಲ ಮಾನವರ ಕರ್ತವ್ಯವಾಗಿದೆ. ಕುರ್‌ಆನ್ ಹೇಳುತ್ತದೆ: "ಸಂದೇಶವಾಹಕರೇ, ಒಳಿತು ಮತ್ತು ಕೆಡುಕು ಸರಿಸಮಾನವಲ್ಲ. ನೀವು ಕೆಡುಕನ್ನು ಅತ್ಯುತ್ತಮ ಒಳಿತಿನ ಮೂಲಕ ದೂರೀಕರಿಸಿರಿ. ನಿಮ್ಮೊಂದಿಗೆ ಹಗೆತನ ಕಟ್ಟಿ ಕೊಂಡವನು ನಿಮ್ಮ ಆಪ್ತ ಮಿತ್ರನಾಗಿ ಬಿಡುವುದನ್ನು ನೀವು ಕಾಣುವಿರಿ." **(41: 34)**

ಎಲ್ಲ ಧರ್ಮಗಳೂ ಮಾನವ ಸೇವೆ ಮತ್ತು ಅವರೊಂದಿಗೆ ಉತ್ತಮ ವರ್ತನೆಗೆ ಬಹಳ ಮಹತ್ವ ನೀಡಿವೆ. ಮಾನವರ ಸೇವೆಯನ್ನು ದೇವನ ಸೇವೆಯೆಂದು ಬಣ್ಣಿಸಲಾಗಿದೆ. ದೇವನ ದಾಸರಿಗೆ ನೆರವಾಗುವುದು, ದೇವನನ್ನು ಸಂಪ್ರೀತಗೊಳಿಸುವ ಸೇವೆಯಾಗಿದೆ. ಪ್ರವಾದಿ ಮುಹಮ್ಮದ್(ಸ) ಹೇಳಿದರು, "ಭೂಮಿಯ ಮೇಲಿರುವವರ

ಮೇಲೆ ನೀವು ಕರುಣೆ ತೋರಿರಿ. ಆಕಾಶದಲ್ಲಿರುವವನು ನಿಮ್ಮ ಮೇಲೆ ಕರುಣೆ ತೋರುವನು."

ಭಾರತೀಯ ಸಮಾಜದಲ್ಲಿ ಧಾರ್ಮಿಕ ಬೇರುಗಳು ಬಲಿಷ್ಠವಾಗಿವೆ. ಅದನ್ನು ಬೆರಳೆಣಿಕೆಯಷ್ಟಿರುವ ಸಂಕುಚಿತ ಮನೋಭಾವದ ಗುಂಪುಗಳು ದುರ್ಬಲಗೊಳಿಸುವ ಕಾರ್ಯದಲ್ಲಿ ನಿರತವಾಗಿದೆ. ಮಾನವೀಯತೆಯೇ ಜನಸೇವೆಯ ಬುನಾದಿಯಾಗಿರ ಬೇಕು. ಮರ್ದಿತರು, ದುರ್ಬಲರು, ಅನಾಥರು, ರೋಗಿಗಳು, ಅಂಗವಿಕಲರು, ಅಪೇಕ್ಷಿತರು, ನಿರ್ಗತಿಕರು ಮತ್ತು ಸಂಕಷ್ಟ ಪೀಡಿತರಿಗೆ ಜಾತಿ ಮತ ಭೇದವಿಲ್ಲದೆ ನೆರವಾಗುವ ಸ್ಫೂರ್ತಿಯನ್ನು ಬೆಳೆಸಬೇಕು.

ಪ್ರತಿಯೊಬ್ಬ ಪ್ರಜೆಗೂ ತಾನು ನೆಚ್ಚಿರುವ ಧರ್ಮದಲ್ಲಿ ವಿಶ್ವಾಸವಿರಿಸುವ ಮತ್ತು ಅದರ ವಿಧಿನಿಷೇಧಗಳನ್ನು ಪಾಲಿಸುವ ಸ್ವಾತಂತ್ರ್ಯವಿದೆ. ಅದಕ್ಕೆ ಯಾವುದೇ ಅಡಚಣೆಯಿಲ್ಲ. ಇಂದು ನಮ್ಮ ದೇಶವು ನೈತಿಕ ಅಧಃಪತನದ ಹಾದಿಯಲ್ಲಿ ವೇಗವಾಗಿ ಸಾಗುತ್ತಿದೆ. ಅಕ್ರಮ, ಅತ್ಯಾಚಾರ, ಮಾನವ ಜೀವಗಳ ಅಗೌರವ, ಹಕ್ಕುಗಳ ಕಬಳಿಕೆ, ಮಾನವರಲ್ಲಿ ಅಂತರ ಸಾಮಾನ್ಯವಾಗಿದೆ. ಕೋಮುವಾದಿ ರಾಜಕೀಯ, ಸಮಾಜದ ಶಾಂತಿ ನೆಮ್ಮದಿಗೆಡಿಸುವ ಪ್ರಯತ್ನಗಳು, ಜನಸಾಮಾನ್ಯರ ಮೂಲಭೂತ ಬೇಡಿಕೆಗಳ ಬಗ್ಗೆ ಆಡಳಿತಗಾರರ ನಿರ್ಲಕ್ಷ್ಯ, ಯುವಜನಾಂಗದ ಪಥಭ್ರಷ್ಟತೆ, ಮದ್ಯಪಾನ, ಲಾಟರಿ, ಮಾದಕ ದ್ರವ್ಯಗಳ ಚಟ, ಅದರೊಂದಿಗೆ ಒಳಿತಿನ ಅಭಿವೃದ್ಧಿ ಮತ್ತು ಕೆಡುಕಿನ ನಿರ್ಮೂಲನದ ಬಗ್ಗೆ ಜನರ ನಿರಾಸಕ್ತಿ ಎಲ್ಲವೂ ಕಳವಳಕಾರಿಯಾಗಿದೆ.

ಈ ಶೋಚನೀಯ ಪರಿಸ್ಥಿತಿಯಲ್ಲಿ ಮಾನವೀಯ ಅನುಕಂಪವಿರುವ ಪ್ರತಿಯೊಬ್ಬ ನಾಗರಿಕನು ವ್ಯಕ್ತಿಯ ನೈತಿಕ ಸ್ವರೂಪವನ್ನು ಉಳಿಸಿ, ಸಮಾಜದಲ್ಲಿ ಶಾಂತಿ ಸ್ಥಾಪನೆಗಾಗಿ ಒಗ್ಗಟ್ಟಿನಿಂದ ಹೋರಾಡಬೇಕಾಗಿದೆ. ಸಮಾಜವನ್ನು ಅಭಿವೃದ್ಧಿ ಪಥದಲ್ಲಿ ಸಾಗಿಸಲಿಕ್ಕಾಗಿ ಪ್ರತಿಯೊಬ್ಬರ ಪರಸ್ಪರ ಪ್ರೀತಿ, ಐಕ್ಯ ಮತ್ತು ಸಹೋದರತೆಯ ವಾತಾವರಣವನ್ನು ಬೆಳೆಸಬೇಕು. ವಿವಿಧ ಭಾಷೆ ಮತ್ತು ಧರ್ಮ ಸಂಸ್ಕೃತಿಯ ಜನರ ನೈತಿಕ ಉತ್ಥಾನಕ್ಕಾಗಿ ಮತ್ತು ಸಮಾಜವನ್ನು ಶಾಂತಿ, ಪ್ರೀತಿ, ಪ್ರಗತಿಯ ತಾಣವನ್ನಾಗಿ ಮಾಡಲು ಪ್ರಯತ್ನಿಸ ಬೇಕು. ಇದು ಎಲ್ಲರ ಧಾರ್ಮಿಕ ಕರ್ತವ್ಯವೂ ಆಗಿದೆ.

ಕೋಮುವಾದ

ನೂರು ಕೋಟಿಗಿಂತ ಅಧಿಕ ಜನಸಂಖ್ಯೆಯಲ್ಲಿರುವ ಭಾರತದಲ್ಲಿ ಸಮಸ್ಯೆಗಳಿಗೇನೂ ಕೊರತೆಯಿಲ್ಲ. ಸಮಸ್ಯೆಗಳ ಸೃಷ್ಟಿಯಲ್ಲಿ ರಾಜಕಾರಣಿಗಳ ಪಾತ್ರವು ಬಹು ದೊಡ್ಡದು. ಪ್ರಸಕ್ತ ನಮ್ಮ ದೇಶವು ಎದುರಿಸುತ್ತಿರುವ ಬಹುದೊಡ್ಡ ಸಮಸ್ಯೆ ಕೋಮು ಪಕ್ಷಪಾತವಾಗಿದೆ. ಇದರಿಂದ ಭಾರತದ ಜಾತ್ಯತೀತ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆ ಗಂಡಾಂತರಕ್ಕೆ ಗುರಿಯಾಗಿದೆ. ಅದು ಇತರ ಸಾವಿರಾರು ಭಯಾನಕ ಸಮಸ್ಯೆಗಳಿಗೆ ಕಾರಣವಾಗುತ್ತಿದೆ. ಉದಾಹರಣೆಗೆ ಬಹುಧರ್ಮೀಯ ಸಮಾಜದಲ್ಲಿ ಪರಸ್ಪರ ಅಪನಂಬಿಕೆ ಮತ್ತು ಸಂಶಯಗಳು, ಪಕ್ಷಪಾತ, ವೈರವಿದ್ವೇಷ, ಹಿಂಸೆ, ಅಕ್ರಮ, ಕ್ಷೋಭೆ, ಜಗಳ, ರಕ್ತಪಾತ, ಅಶಾಂತಿ ಮತ್ತು ಅರಾಜಕತೆ ಮುಂತಾದ ಸಮಸ್ಯೆಗಳಿಂದಾಗಿ ದೇಶದ ಒಗ್ಗಟ್ಟು, ಐಕ್ಯ ಮತ್ತು ಭದ್ರತೆಗೆ ಭೀಕರ ಅಪಾಯವಿದೆ.

ಧರ್ಮ ವಿಶ್ವಾಸಿಗಳು ಸಂಕುಚಿತ ಮನಸ್ಸಿನವರಾಗಬಾರದು. ಅಂಥವರು ಯಾವುದೇ ಧರ್ಮದ ಪ್ರತಿನಿಧಿಯಾಗಿರಲು ಸಾಧ್ಯವಿಲ್ಲ. ಮಾನವ ಜನಾಂಗವನ್ನು ಪ್ರಗತಿಪಥದತ್ತ ಸಾಗಿಸಲು ಮಾನವರಲ್ಲಿ ವಿಶಾಲ ಮನೋಭಾವವಿರಬೇಕಾದ ಅಗತ್ಯವಿದೆ. ಪಕ್ಷಪಾತ ಯಾರಲ್ಲಿ ಹುಟ್ಟುತ್ತದೋ ಅವರು ಹತಾಶರು ಮತ್ತು ಮಾನಸಿಕ ರೋಗಿಗಳಾಗುತ್ತಾರೆ. ಅವರು ಆತ್ಮವಿಶ್ವಾಸ ಕಳೆದುಕೊಂಡು ಕೋಮುವಾದದಲ್ಲಿ ವಿಲೀನರಾಗಿ ಬಿಡುತ್ತಾರೆ. ಅವರು ಯಾವಾಗಲೂ ತಮ್ಮ ಕೋಮಿನ ಬಗ್ಗೆ ಮಾತ್ರ ಆಲೋಚಿಸುತ್ತಾರೆ. ಜನರು ಪರಸ್ಪರ ಗೌರವಿಸದಿದ್ದರೆ ಜಗತ್ತಿನ ಯಾವುದೇ ರಂಗದಲ್ಲಿ ಅವರ ಶಕ್ತಿ ಸಾಮರ್ಥ್ಯಗಳು ಪ್ರಯೋಜನಕ್ಕೆ ಬರಲಾರವು. ಅದು ದೇಶದ ಅಭಿವೃದ್ಧಿಗೆ ಬಹುದೊಡ್ಡ ಅಡ್ಡಿಯಾಗಿದೆ. ಅದು ಮಾನವರ ಮಧ್ಯೆ ಸಂಘರ್ಷಕ್ಕೆ ಅವಕಾಶ ನೀಡುತ್ತದೆ. ಅದರಿಂದ ಮಾನವನು ಮಹಾ ದುರಂತಕ್ಕೆ ಬಲಿಯಾಗುತ್ತಾನೆ.

"ಓರ್ವರು ಪ್ರವಾದಿಯವರೊಡನೆ(ಸ) ಕೇಳಿದರು ಓರ್ವನು ತನ್ನವರನ್ನು ಪ್ರೀತಿಸಿದರೆ ಅದು ಕೋಮು ಪಕ್ಷಪಾತವಾಗುವುದೇ?" ಪ್ರವಾದಿವರ್ಯರು(ಸ) ಹೇಳಿದರು: "ಇಲ್ಲ, ಅದು ಪಕ್ಷಪಾತವಲ್ಲ. ಕೋಮು ಪಕ್ಷಪಾತವೆಂದರೆ ಓರ್ವನು ತನ್ನವರಿಗೆ ಅವರ ಅಕ್ರಮ ಕಾರ್ಯಗಳಲ್ಲೂ ನೆರವಾಗುವುದಾಗಿದೆ."

ಮಾನವ ಪ್ರಾಣವನ್ನು ಇಸ್ಲಾಮ್ ಅತ್ಯಧಿಕ ಪವಿತ್ರವೆಂದು ಪರಿಗಣಿಸುತ್ತದೆ. ನ್ಯಾಯೋಚಿತ ಕಾರಣವಿಲ್ಲದೆ ಯಾರ ಪ್ರಾಣ ಹರಣವನ್ನೂ ಅದು ಸಮ್ಮತಿಸುವುದಿಲ್ಲ.

"ಒಬ್ಬ ಮಾನವನ ಕೊಲೆಯ ಬದಲಿಗೆ ಅಥವಾ ಭೂಮಿಯಲ್ಲಿ ಕ್ಷೋಭೆಯುಂಟು ಮಾಡುವ ಕಾರಣಕ್ಕಾಗಿ ಹೊರತು ಯಾರಾದರೂ ಒಬ್ಬ ಮಾನವನನ್ನು ವಧಿಸಿದರೆ ಅವನು ಅಖಿಲ ಮಾನವಕುಲವನ್ನೇ ವಧಿಸಿದಂತೆ ಮತ್ತು ಒಬ್ಬನು ಇನ್ನೊಬ್ಬನಿಗೆ ಜೀವದಾನ ಮಾಡಿದರೆ ಅವನು ಅಖಿಲ ಮಾನವ ಕೋಟಿಗೆ ಜೀವದಾನ ಮಾಡಿದಂತೆ".

(ಪವಿತ್ರ ಕುರ್‌ಆನ್, 5:32)

"ಓ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗಾಗಿ ಸತ್ಯದಲ್ಲೇ ನೆಲೆನಿಲ್ಲುವವರೂ ನ್ಯಾಯದ ಸಾಕ್ಷ್ಯವಹಿಸುವವರೂ ಆಗಿರಿ. ಒಂದು ವಿಭಾಗದ ಮೇಲಿನ ದ್ವೇಷವು ನಿಮ್ಮನ್ನು ನ್ಯಾಯದಿಂದ ವಿಮುಖರಾಗುವಷ್ಟು ರೇಗಿಸದಿರಲಿ. ನ್ಯಾಯ ಪಾಲಿಸಿರಿ. ಇದು ದೇವಭಯಕ್ಕೆ ಹೆಚ್ಚು ಅನುಗುಣವಾಗಿರುತ್ತದೆ." **(ಪವಿತ್ರ ಕುರ್‌ಆನ್, 5:8)**

ಈ ಸಂಕುಚಿತ ಕೋಮು ಪಕ್ಷಪಾತದ ಭೀಕರ ಅಪಾಯದಿಂದ ದೇಶದ ರಕ್ಷಣೆ ಅತ್ಯವಶ್ಯಕವಾಗಿದೆ. ಅದು ಪ್ರತಿಯೊಬ್ಬ ದೇಶಪ್ರೇಮಿಯ ಕರ್ತವ್ಯವೂ ಆಗಿದೆ. ತಂತಮ್ಮ ಶಕ್ತಿ ಸಾಮರ್ಥ್ಯ ಮತ್ತು ಪದವಿಗನುಸಾರವಾಗಿ ಪ್ರತಿಯೊಬ್ಬ ಪೌರನು ಈ ಬಗ್ಗೆ ಎಚ್ಚರ ವಹಿಸಬೇಕಾಗಿದೆ:

1. ಪರಸ್ಪರ ನಂಬಿಕೆ, ಧರ್ಮ ಮತ್ತು ಸಂಸ್ಕೃತಿಯ ಬಗ್ಗೆ ಗೌರವ ಭಾವನೆ ಬೆಳೆಸಬೇಕು. ಹಾಗೆಯೇ ಪರಸ್ಪರ ಭ್ರಾತೃತ್ವ ಭಾವನೆಯನ್ನು ವ್ಯಾಪಕಗೊಳಿಸಲು ಪ್ರಯತ್ನಿಸಬೇಕು.
2. ರಾಜಕೀಯ ಪಕ್ಷಗಳು ಮತ್ತು ಮುಖಂಡರು ದೇಶ ಮತ್ತು ಪ್ರಜೆಗಳ ಹಿತಕ್ಕೆ ತಮ್ಮ ವೈಯಕ್ತಿಕ ಮತ್ತು ಪಕ್ಷದ ಹಿತಕ್ಕಿಂತ ಆದ್ಯತೆ ನೀಡಬೇಕು. ದೇಶವನ್ನು ಪಣಕ್ಕಿಡುವ ಓಟು ಬ್ಯಾಂಕಿನ ವಿನಾಶಕಾರಿ ರಾಜಕೀಯ ಆಟದಿಂದ ದೂರ ಉಳಿಯಬೇಕು.
3. ಕೋಮುವಾದೀ ವ್ಯಕ್ತಿ, ರಾಜಕೀಯ ಪಕ್ಷ ಮತ್ತು ಅಂತಹ ಸಂಘ ಸಂಸ್ಥೆಗಳನ್ನು ಸರ್ವಥಾ ಬೆಂಬಲಿಸಬಾರದು.
4. ಕೋಮುವಾದವು ಸ್ವತಃ ದೇಶಕ್ಕೆ ಮಾರಕವೆಂದು ತಿಳಿದು ಆ ಬಗ್ಗೆ ಜನ ಜಾಗೃತಿ ಮೂಡಿಸಲು ಪ್ರಯತ್ನಿಸಬೇಕು.

5. ಶಿಕ್ಷಣ ಮಾಧ್ಯಮದ ಮೂಲಕ ಹೊಸ ಪೀಳಿಗೆಯ ಮನಸ್ಸನ್ನು ಪರಸ್ಪರ ತಪ್ಪುಕಲ್ಪನೆ, ದ್ವೇಷ ಮತ್ತು ಪಕ್ಷಪಾತಗಳಿಂದ ಮುಕ್ತಗೊಳಿಸಬೇಕು. ಪಠ್ಯಪುಸ್ತಕ ಮತ್ತು ಇತಿಹಾಸವನ್ನು ಕೋಮು ವಿಷದಿಂದ ಮುಕ್ತಗೊಳಿಸಲು ಪ್ರಯತ್ನಿಸಬೇಕು.

ಭಯೋತ್ಪಾದನೆ

ಇಂದು ಸಮೂಹ ಮಾಧ್ಯಮಗಳು ಭಯೋತ್ಪಾದನೆ ಎಂಬ ಪದವನ್ನು ವ್ಯಾಪಕವಾಗಿ ಬಳಸುತ್ತಿವೆ. ಕೆಲವು ದೇಶಗಳು, ಅಲ್ಲಿನ ಆಡಳಿತಗಾರರು ಮತ್ತು ರಾಜಕೀಯ ಮುಂದಾಳುಗಳು ಧರ್ಮದ ಬಗ್ಗೆ ಜನರಲ್ಲಿ ದ್ವೇಷ ಭಾವನೆ ಹುಟ್ಟಿಸುವ ಸಲುವಾಗಿ ಈ ಪದವನ್ನು ನಿರ್ದಿಷ್ಟ ಧರ್ಮದೊಂದಿಗೆ ಜೋಡಿಸುತ್ತಿದ್ದಾರೆ. ಭಯೋತ್ಪಾದನೆಯು ಅನೈತಿಕ ಮತ್ತು ಅಮಾನವೀಯವೆಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಮಾನವ ಆತ್ಮಸಾಕ್ಷಿಯು ಅದನ್ನು ಎಂದಿಗೂ ಸಹಿಸಲಾರದು. ಸಭ್ಯ ನಾಗರಿಕ ಸಮಾಜವು ಈ ಅಕ್ರಮ ಹಿಂಸೆಗೆ ಅನುಮತಿ ನೀಡಲಾರದು. ಏಕೆಂದರೆ ಅದು ಮಾನವಕುಲವನ್ನು ನಾಗರಿಕತೆಯಿಂದ ಪೈಶಾಚಿಕತೆಯೆಡೆಗೆ ಸಾಗಿಸುವುದಕ್ಕೆ ಸಮಾನವಾಗಿದೆ. ಈ ರೀತಿಯ ಪೈಶಾಚಿಕತೆ ಮತ್ತು ಕ್ರೌರ್ಯವನ್ನು ಧರ್ಮವು ಎಂದೂ ಸಮರ್ಥಿಸುವುದಿಲ್ಲ. ಭಯೋತ್ಪಾದನೆ ಮತ್ತು ಧರ್ಮ ಎಂದೂ ಒಂದೆಡೆ ಸೇರಲಾರವು.

ಇಸ್ಲಾಮ್, ಹಿಂಸೆ ಮತ್ತು ಗಲಭೆಯನ್ನು ಎಂದೂ ಸಹಿಸುವುದಿಲ್ಲ. ಇತರ ಧರ್ಮಗಳೂ ಅಷ್ಟೆ. ಆದರೆ ತಮ್ಮ ಸ್ವಾರ್ಥಸಾಧನೆಗಾಗಿ ಭಯೋತ್ಪಾದನೆಯನ್ನು ಹುಟ್ಟು ಹಾಕುವವರಿಗೆ ಅವರು ಯಾವುದೇ ಕುಟುಂಬ, ಗೋತ್ರ, ಜನಾಂಗಕ್ಕೆ ಸೇರಿದವರಾಗಿದ್ದರೂ ಯಾವುದೇ ಧರ್ಮದೊಂದಿಗೆ ಸಂಬಂಧವಿರುವುದಿಲ್ಲ. ವಾಸ್ತವದಲ್ಲಿ ಅವರು ಧರ್ಮದ್ರೋಹಿಗಳಾಗಿದ್ದಾರೆ.

ಶಾಂತಿ ವಿರೋಧಿಗಳು ಭಯೋತ್ಪಾದನೆಯ ತೆರೆಮರೆಯಲ್ಲಿ ಮಾನವ ಮನಸ್ಸುಗಳನ್ನು ಒಡೆಯುತ್ತಿದ್ದಾರೆ. ಅವರು ಪರಸ್ಪರ ಪ್ರೀತಿ ಸೌಹಾರ್ದವನ್ನು ಮುರಿಯುತ್ತಿದ್ದಾರೆ. ನೈಜ ಧರ್ಮವಿಶ್ವಾಸಿಗಳು ಅವರ ಬಗ್ಗೆ ಜಾಗ್ರತರಾಗಿರಬೇಕು. ವಿವಿಧ ಧಾರ್ಮಿಕ ನಾಯಕರು ಪರಸ್ಪರ ಒಟ್ಟು ಸೇರಿ ಯುವಜನರ ವೈಚಾರಿಕ ಮತ್ತು ಬೌದ್ಧಿಕ ತರಬೇತಿಯ ಕಡೆಗೆ ಗಮನ ಹರಿಸಬೇಕು.

ವಿವಿಧತೆಯಲ್ಲಿ ಏಕತೆ

ಆಧುನಿಕ ಜಗತ್ತಿನಲ್ಲಿ ದೇಶ, ಭಾಷೆ, ವರ್ಗ, ವರ್ಣಗಳೇ ಬಹುಮಂದಿಯ ದೇವರಾಗಿವೆ. ಅದಕ್ಕಾಗಿ ಸಾಯುವವರಿದ್ದಾರೆ. ಅವು ಮಾನವೀಯ ಸಂಬಂಧದ ಮೂಲಾಧಾರವಾಗಿ ಮಾರ್ಪಟ್ಟಿವೆ. ಸಮಕಾಲೀನ ಜಗತ್ತಿನಲ್ಲಿ ತಾಂಡವವಾಡುತ್ತಿರುವ ಬಹುತೇಕ ಗಲಭೆ, ಗೊಂದಲ, ಕೊಲೆ, ಸುಲಿಗೆ ಮತ್ತು ಯುದ್ಧಗಳಿಗೆ ದೇಶ, ವರ್ಣ, ವರ್ಗ ಪಕ್ಷಪಾತವೇ ಪ್ರಧಾನ ಕಾರಣವಾಗಿದೆ. ಎರಡು ಜಾಗತಿಕ ಯುದ್ಧಗಳೂ ಸೇರಿದಂತೆ 21ನೆಯ ಶತಮಾನದಲ್ಲಿ ನಡೆಯುತ್ತಿರುವ ಹೆಚ್ಚಿನೆಲ್ಲ ಸಂಘರ್ಷಗಳು ಅದಕ್ಕೆ ಸಾಕ್ಷಿಯಾಗಿವೆ. ನಮ್ಮ ರಾಷ್ಟ್ರದಲ್ಲಿ ಸಹಸ್ರಾರು ಮಂದಿ ಪ್ರಾದೇಶಿಕ ಭಾವಾವೇಶಗಳಿಂದ ಶೌರ್ಯ ಪ್ರದರ್ಶಿಸುತ್ತಿದ್ದಾರೆ. ಭಾಷಾ ಗಲಭೆಗಳಲ್ಲಿ ಅನೇಕ ಮಂದಿ ಹತರಾಗಿದ್ದಾರೆ. ವರ್ಗ ಮತ್ತು ಜಾತಿ ಸಂಘರ್ಷಗಳ ಅವಸ್ಥೆಯೂ ಅಷ್ಟೆ. ಜಗತ್ತು ಎಲ್ಲೆಡೆ ಇಂಥ ಸಂಕುಚಿತ ಚಿಂತನೆಗಳಿಗೆ ಅಧೀನವಾಗಿವೆ. ಈ ವಿಷಯದಲ್ಲಿ ಬಂಡವಾಳಶಾಹಿ ಮತ್ತು ಸಮಾಜವಾದೀ ಸಮೂಹಗಳೂ ಸಮಾನವಾಗಿವೆ.

ವಸ್ತುತಃ ಮಾನವನಿಗೆ ತನ್ನ ವರ್ಗ, ವರ್ಣ, ವಂಶ, ಭಾಷೆಗಳ ಆಯ್ಕೆಯಲ್ಲಿ ಯಾವ ಪಾತ್ರವೂ ಇಲ್ಲ. ಅವು ದೇವ ನಿರ್ಣಿತ. ತಮ್ಮ ಮೈ ಬಣ್ಣ, ಹುಟ್ಟು ಮತ್ತು ಕುಟುಂಬವನ್ನು ನಿರ್ಣಯಿಸಲು ಯಾರಿಂದಲೂ ಸಾಧ್ಯವಿಲ್ಲ. ಆದ್ದರಿಂದ ಅಂತಹ ವೈವಿಧ್ಯತೆಗಳನ್ನು ಮಾನವೀಯ ಶ್ರೇಷ್ಠತೆಯಾಗಿ ಅಂಗೀಕರಿಸುವುದು ಮೌಢ್ಯವಾಗಿದೆ. ವರ್ಗ, ವರ್ಣ, ಜಾತಿ, ದೇಶ ವೈವಿಧ್ಯತೆಗಳನ್ನು ಮಾನವೀಯ ಸಂಬಂಧದ ಆಧಾರವಾಗಿ ಬಳಸುವುದು ಕ್ರೌರ್ಯ ಮತ್ತು ದ್ರೋಹವಾಗಿದೆ. ಆದ್ದರಿಂದ ಅವುಗಳನ್ನು ಸ್ನೇಹ-ಸೌಹಾರ್ದ ಮತ್ತು ವೈರ ವಿದ್ವೇಷಗಳ ಮಾಪಕವಾಗಿ ಅಂಗೀಕರಿಸಬಾರದು. ಬದಲಾಗಿ ವ್ಯಕ್ತಿ ಮತ್ತು ಸಮಾಜಗಳು ಸ್ವಯಂ ಆಯ್ಕೆ ಮಾಡಬಹುದಾದ ತತ್ವಸಿದ್ಧಾಂತ, ನಂಬಿಕೆ ಮತ್ತು ವಿಶ್ವಾಸಗಳನ್ನು ಮಾನವೀಯ ಸಂಬಂಧದ ಬುನಾದಿಯಾಗಿ ಅಂಗೀಕರಿಸಬೇಕು.

ಒಂದೇ ಜನತೆ

ಇಸ್ಲಾಮೀ ದೃಷ್ಟಿಕೋನದಂತೆ, ಮಾನವರೆಲ್ಲರ ಸೃಷ್ಟಿಕರ್ತ ಮತ್ತು ಸಂರಕ್ಷಕ ಒಬ್ಬನೇ. ಎಲ್ಲರೂ ಏಕದೇವನ ಸೃಷ್ಟಿಗಳು ಮತ್ತು ಕೇವಲ ಆತನ ದಾಸರಾಗಿದ್ದಾರೆ.

"ಜನರೇ! ನಿಮ್ಮ ಪ್ರಭುವನ್ನು ಭಯಪಡಿರಿ. ಒಂದೇ ಆತ್ಮದಿಂದ ನಿಮ್ಮನ್ನು ಸೃಷ್ಟಿಸಿ, ಅದೇ ಆತ್ಮದಿಂದ ಅದರ ಜತೆಯನ್ನು ಸೃಷ್ಟಿಸಿ, ಅವೆರಡರಿಂದ ಹೇರಳ ಸ್ತ್ರೀ ಪುರುಷರನ್ನು ಜಗತ್ತಿನಲ್ಲಿ ಹಬ್ಬಿಸಿದವನು ಆತನೇ."

(ಪವಿತ್ರ ಕುರ್‌ಆನ್, 4:1)

"ಮಾನವರೇ ನಿಮ್ಮನ್ನು ನಾವು ಒಂದು ಗಂಡು ಮತ್ತು ಹೆಣ್ಣಿನಿಂದ ಸೃಷ್ಟಿಸಿದ್ದೇವೆ. ಅನಂತರ ನಿಮ್ಮನ್ನು ನಾವು ಸಮುದಾಯ ಮತ್ತು ಗೋತ್ರಗಳಾಗಿ ಮಾಡಿದೆವು. ನೀವು ಪರಸ್ಪರ ಗುರುತಿಸಲಿಕ್ಕಾಗಿ."

(ಪವಿತ್ರ ಕುರ್‌ಆನ್, 49:13)

ಆದ್ದರಿಂದ ಹಿಂದೂಗಳು, ಮುಸ್ಲಿಮರು, ಕ್ರೈಸ್ತರು, ಸಿಕ್ಖರು, ಕರಿಯರು, ಬಿಳಿಯರು, ಏಶ್ಯನರು, ಅಮೇರಿಕನರು ಎಲ್ಲರೂ ಒಂದೇ ಕುಟುಂಬಕ್ಕೆ ಸೇರಿದವರು, ಎಲ್ಲರೂ ದೇವನ ಆಶ್ರಿತರು. ಪೈಗಂಬರರು(ಸ) ಹೇಳಿದ್ದಾರೆ: ಸೃಷ್ಟಿಗಳೆಲ್ಲರೂ ದೇವನ ಆಶ್ರಿತರು. ಆದ್ದರಿಂದ ಆತನ ಆಶ್ರಿತರಿಗೆ ನೆರವಾಗುವವರನ್ನು ಆತನು ಬಹಳವಾಗಿ ಪ್ರೀತಿಸುತ್ತಾನೆ.

ವರ್ಗ, ವರ್ಣ, ದೇಶ, ಭಾಷೆ, ಕುಟುಂಬ, ಗೋತ್ರ, ಜಾತಿ, ಸಮುದಾಯ ಇತ್ಯಾದಿಗಳನ್ನು ಉಚ್ಚನೀಚತೆಯ ಮಾಪಕವೆಂದು ಪರಿಗಣಿಸುವ ಹೀನಸ್ಥಿತಿಯನ್ನು ಇಸ್ಲಾಮ್ ವಿರೋಧಿಸುತ್ತದೆ. "ನಿಮ್ಮಲ್ಲಿ ಅತ್ಯಧಿಕ ಭಯಭಕ್ತಿಯುಳ್ಳವನೇ ದೇವನ ಬಳಿ ಅತ್ಯಂತ ಗೌರವಾರ್ಹನು."

(ಪವಿತ್ರ ಕುರ್‌ಆನ್, 49 :13)

"ಯಾವನಾದರೂ ಅಣುಗಾತ್ರ ಒಳಿತು ಮಾಡಿದರೆ ಅದರ ಫಲವು ಆತನಿಗೆ ದೊರೆಯುವುದು. ಯಾವನಾದರೂ ಅಣುಗಾತ್ರ ಕೆಡುಕು ಮಾಡಿದರೂ ಅದರ ಫಲ ದೊರೆಯುವುದು."

(ಪವಿತ್ರ ಕುರ್‌ಆನ್, 99: 7,8)

ಪ್ರವಾದಿ(ಸ) ಹೇಳಿದ್ದಾರೆ; ಅರಬನಿಗೆ ಅರಬೇತರನಿಗಿಂತ ಬಿಳಿಯನಿಗೆ ಕರಿಯನಿಗಿಂತ ಯಾವ ಶ್ರೇಷ್ಠತೆಯೂ ಇಲ್ಲ. ದೇವನ ಭಯಭಕ್ತಿಯ ಆಧಾರದಲ್ಲಿ ಹೊರತು.

ಧರ್ಮ ಸಹಿಷ್ಣುತೆ

ವಿಶ್ವಾಸವೇ-ಧರ್ಮದ ಬುನಾದಿ. ವಿಶ್ವಾಸದಿಂದ ಕರ್ಮಗಳು ಹುಟ್ಟುತ್ತವೆ. ಹೃದಯವು ವಿಶ್ವಾಸದ ಮೂಲವಾಗಿದ್ದು ಮನವರಿಕೆ ಮತ್ತು ಸಾಕ್ಷ್ಯಾಧಾರಿತ ಒಪ್ಪಿಗೆಯಿಂದ ಅದು ಹುಟ್ಟುತ್ತದೆ. ಬಲಾತ್ಕಾರ, ಪ್ರಲೋಭನೆ ಅಥವಾ ಬೆದರಿಕೆಗಳಿಂದ ಯಾವುದೇ ವಿಷಯದ ಕುರಿತು ಯಾರಲ್ಲಿಯೂ ವಿಶ್ವಾಸ ಹುಟ್ಟಿಸಲು ಸಾಧ್ಯವಿಲ್ಲ. ಅಂದರೆ ಯಾವುದಾದರೊಂದು ವಿಶಿಷ್ಟ ಧರ್ಮ, ವಿಶ್ವಾಸ ಅಥವಾ ಸಿದ್ಧಾಂತವನ್ನು ಯಾವುದೇ ರೀತಿಯ ಒತ್ತಡದಿಂದ ಯಾರ ಹೃದಯದಲ್ಲಿಯೂ ನೆಲೆಯೂರಿಸಲು ಸಾಧ್ಯವಿಲ್ಲ. ಅಂಥ ಒತ್ತಡಗಳನ್ನು ನಿಷೇಧಿಸಬೇಕೆಂದು ಪ್ರವಾದಿಯವರಿಗೆ ಆದೇಶಿಸಲಾಗಿದೆ.

"ಧರ್ಮದ ವಿಷಯದಲ್ಲಿ ಯಾವುದೇ ಒತ್ತಾಯ ಬಲಾತ್ಕಾರವಿಲ್ಲ." (2:256) ವಾಸ್ತವದಲ್ಲಿ ಯಾವುದೇ ವಿಚಾರವನ್ನು ಮಾನವನ ಮೇಲೆ ಬಲಾತ್ಕಾರವಾಗಿ ಹೇರಲು ಸಾಧ್ಯವೇ ಇಲ್ಲ. ರಟ್ಟೆ ಬಲದಿಂದ ಜನರನ್ನು ಮಣಿಸಬಹುದೇ ಹೊರತು ಅವರ ಮನಸ್ಸನ್ನು ಪರಿವರ್ತಿಸಲು ಮತ್ತು ಜಯಿಸಲು ಸಾಧ್ಯವೇ ಇಲ್ಲ. ಧರ್ಮದ ವೈಚಾರಿಕ, ನೈತಿಕ ಮತ್ತು ಆಚಾರ ಪದ್ಧತಿಯನ್ನು ಯಾರ ಮೇಲೂ ಬಲಾತ್ಕಾರವಾಗಿ ಹೇರುವ ಪ್ರಶ್ನೆಯೇ ಇಲ್ಲ.

ಧರ್ಮ ಸೂತ್ರಗಳು

ಧರ್ಮ ಎಂದರೆ ಕೇವಲ ಆರಾಧನಾ ಕರ್ಮಗಳೆಂದು ಸಾಮಾನ್ಯವಾಗಿ ಭಾವಿಸಲಾಗುತ್ತದೆ. ವಾಸ್ತವದಲ್ಲಿ ಅದು ಸಂಪೂರ್ಣ ಜೀವನವನ್ನು ಆಧರಿಸಿದೆ. ಅದು ಜೀವನದ ಯಾವುದಾದರೂ ಒಂದು ಅಥವಾ ಕೆಲವು ಶಾಖೆಗಳಿಗೆ ಮಾತ್ರ ಸೀಮಿತವಾಗಿಲ್ಲ. ಸಂಪೂರ್ಣ ಜೀವನದಲ್ಲಿ ವ್ಯಾಪಿಸಿದೆ. ಅದು ಆರಾಧನೆ ಮತ್ತು ನೈತಿಕತೆಯನ್ನು ಬೇರ್ಪಡಿಸುವುದಿಲ್ಲ. ಮುಹಮ್ಮದ್ ಪೈಗಂಬರರ ವಚನಗಳನ್ನು ನಿಷ್ಪಕ್ಷವಾಗಿ ಗಮನಿಸಿದರೆ ಈ ವಿಷಯ ಸ್ಪಷ್ಟವಾಗುತ್ತದೆ. ಅವರ ಈ ಕೆಳಗಿನ ಕೆಲವು ವಚನಗಳಿಂದ ಧರ್ಮವೇನೆಂದು ಅರ್ಥೈಸಬಹುದು.

- ಅಕ್ರಮ ದುಡಿಮೆಯಿಂದ ಬೆಳೆದ ದೇಹ ಸ್ವರ್ಗಕ್ಕೆ ಹೋಗಲಾರದು.

ನ್ಯಾಯೋಚಿತ ಸಂಪಾದನೆಯನ್ನು ಹುಡುಕುವುದೂ ಧಾರ್ಮಿಕ ಕರ್ತವ್ಯವಾಗಿದೆ.

ಸತ್ಯಸಂಧತೆ ಮತ್ತು ಪ್ರಾಮಾಣಿಕತೆಯೊಂದಿಗೆ ವ್ಯಾಪಾರ ಮಾಡುವ ವ್ಯಾಪಾರಿಯು ನಿರ್ಣಾಯಕ ದಿನದಂದು ಪ್ರವಾದಿಗಳು, ಸತ್ಯಸಂಧರು ಮತ್ತು ಹುತಾತ್ಮರ ಸಾಲಿನಲ್ಲಿರುತ್ತಾನೆ.

ಕ್ರಯ-ವಿಕ್ರಯ ಮತ್ತು ಅನ್ಯರಿಂದ ಹಕ್ಕುಗಳನ್ನು ವಸೂಲು ಮಾಡುವ ವಿಷಯದಲ್ಲಿ ಔದಾರ್ಯ ತೋರಿಸುವಾತನನ್ನು ದೇವನು ಅನುಗ್ರಹಿಸಲಿ.

- ನೆನಪಿರಲಿ. ಪ್ರಾಮಾಣಿಕತೆಯ ಗುಣವಿಲ್ಲದಿರುವವನಲ್ಲಿ ಸತ್ಯವಿಶ್ವಾಸವೂ ಇಲ್ಲ.

ತನ್ನ ವಾಗ್ದಾನಗಳ ಪಾಲನೆ ಮಾಡದವನಿಗೆ ಧರ್ಮದಲ್ಲಿ ಯಾವುದೇ ರೀತಿಯ ಪಾಲಿಲ್ಲ.

ಕಪಟ ವಿಶ್ವಾಸಿಯ ಮೂರು ಲಕ್ಷಣಗಳಿವೆ. ಸುಳ್ಳು ಹೇಳುವುದು, ಅಮಾನತ್ತಿ(ನ್ಯಾಸ)ನಲ್ಲಿ ವಂಚನೆ ಮಾಡುವುದು ಮತ್ತು ವಚನ ಪಾಲಿಸದಿರುವುದು.

- ಮೋಸ ಮಾಡುವವನು ನಮ್ಮವನಲ್ಲ. ಮೋಸ ಮತ್ತು ವಂಚನೆ ನರಕಕ್ಕೆ ಸಾಗಿಸುತ್ತವೆ.

ದೋಷವಿರುವ ಅಥವಾ ಕೆಟ್ಟ ವಸ್ತುಗಳನ್ನು ಮೋಸದಿಂದ ಇತರರಿಗೆ ಮಾರುವವನು ದೇವನ ಕ್ರೋಧಕ್ಕೆ ಪಾತ್ರವಾಗುತ್ತಾನೆ.

ದೇವ ಭಯದಿಂದ ರೋದಿಸುವವನು ಎಂದೂ ನರಕಕ್ಕೆ ಹೋಗಲಾರ.

ಸೃಷ್ಟಿಕರ್ತ ಮತ್ತು ನಿರ್ಣಾಯಕ ದಿನದ ಮೇಲೆ ವಿಶ್ವಾಸವಿರಿಸುವ ಯಾವನೂ ತನ್ನ ನೆರೆಯಾತನನ್ನು ಉಪದ್ರವಿಸಲಾರನು.

- ನೆರೆಯಾತ ಹಸಿದಿರುವಾಗ ಹೊಟ್ಟೆ ತುಂಬಾ ಊಟ ಮಾಡುವವನು ಸತ್ಯವಿಶ್ವಾಸಿಯಲ್ಲ.

- ಪತ್ನಿಯರ ಹಕ್ಕುಗಳನ್ನು ಕೊಡುವ ನಿಟ್ಟಿನಲ್ಲಿ ಉತ್ತಮರಾದವರೇ ನಿಮ್ಮ ಪೈಕಿ ಅತ್ಯುತ್ತಮರು.
- ಮಹಿಳೆಯರೊಂದಿಗೆ ಸದ್ವರ್ತನೆ ಕೈಗೊಳ್ಳಬೇಕೆಂಬ ನನ್ನ ವಿಶೇಷ ಆದೇಶವನ್ನು ಸದಾ ನೆನಪಿನಲ್ಲಿಡಬೇಕು.
- ಸಚ್ಚಾರಿತ್ರ್ಯವಂತರು ಮತ್ತು ಮನೆಯವರೊಂದಿಗೆ ಪ್ರೀತಿ ಹಾಗೂ ಸಹಾನುಭೂತಿಯಿಂದ ವರ್ತಿಸುವವರೇ ನೈಜ ಧರ್ಮವಿಶ್ವಾಸಿಗಳು.
- ಅನಾಥರ ಮೇಲ್ವಿಚಾರಣೆ ಮಾಡುವವರು ಸ್ವರ್ಗದಲ್ಲಿ ನನ್ನ ಸನಿಹದಲ್ಲಿರುತ್ತಾರೆ.
- ಹಸಿದವರಿಗೆ ಊಟದ ವ್ಯವಸ್ಥೆ ಮಾಡಿರಿ. ರೋಗಿಗಳ ಶುಶ್ರೂಷೆ ಮಾಡಿರಿ. ಬಂಧಿತರಾದವರನ್ನು ಬಿಡಿಸಿರಿ.
- ಕಷ್ಟದಲ್ಲಿರುವವರಿಗೆ ನೆರವಾಗಿರಿ. ಪಥಭ್ರಷ್ಟರಿಗೆ ದಾರಿ ತೋರಿಸಿರಿ.
- ದೇಹ ಮತ್ತು ವಸ್ತ್ರದ ಪರಿಶುದ್ಧತೆಯು ವಿಶ್ವಾಸದ ಅರ್ಧಾಂಶವಾಗಿದೆ.
- ಯಾರಿಂದ ಜನರಿಗೆ ಸೊತ್ತು ವಿತ್ತಗಳ ಭಯವಿಲ್ಲವೋ ಅವನೇ ನೈಜ ವಿಶ್ವಾಸಿ.
- ನಿನಗಾಗಿ ಮೆಚ್ಚುವುದನ್ನೇ ನೀನು ಇತರರಿಗೂ ಮೆಚ್ಚಬೇಕು. ನಿನಗಾಗಿ ಇಷ್ಟಪಡದ್ದನ್ನು ಇತರರಿಗೂ ಇಷ್ಟಪಡಬಾರದು.
- ನಾನು ಜನರ ಸಂಗಡ ಇದ್ದೇನೆ. ಅವರು ಒಳ್ಳೆಯವರಾದರೆ ನಾನೂ ಒಳ್ಳೆಯವನಾಗುತ್ತೇನೆ. ಅವರು ಕೆಟ್ಟರೆ ನಾನೂ ಕೆಡುತ್ತೇನೆಂದು ಹೇಳುವ ಸಂದರ್ಭ ಸಾಧಕನಾಗಬೇಡ. ಬದಲಾಗಿ, ಜನರು ಒಳ್ಳೆಯವರಾದರೆ ಅವರ ಒಳಿತಿನಲ್ಲಿ ಭಾಗಿಯಾಗಲು, ಅವರು ಕೆಟ್ಟರೆ ಅವರ ಕೆಡುಕಿನಿಂದ ದೂರವಿರಲು ಸಿದ್ಧನಾಗಬೇಕು.
- ಸತ್ಯವನ್ನೇ ನುಡಿಯಿರಿ. ಸತ್ಯಮಾರ್ಗದಲ್ಲೇ ನಡೆಯಿರಿ. ಸತ್ಯದ ಧ್ವಜವಾಹಕರಾಗಿರಿ.

- ತಮ್ಮವರು ಪರಕೀಯರು ಎಂಬ ಭೇದವಿಲ್ಲದೆ ಎಲ್ಲರೊಂದಿಗೂ ನ್ಯಾಯ ಪಾಲಿಸಿರಿ.
- ಎಲ್ಲರ ಹಕ್ಕುಗಳನ್ನು ನೀಡಿರಿ. ಎಲ್ಲರೊಡನೆಯೂ ಸದ್ವ್ಯವಹಾರ ಮಾಡಿರಿ.

ನೈಜ ಧರ್ಮನಿಷ್ಠೆ

ಭಾರತವು ವಿವಿಧ ಧರ್ಮ, ಭಾಷೆ ಮತ್ತು ಸಂಸ್ಕೃತಿಗಳಿಂದ ಸಮೃದ್ಧವಾದ ವರ್ಣಮಯ ರಾಷ್ಟ್ರವಾಗಿದೆ. ಹಾಗಿದ್ದರೂ ಬಹುತೇಕ ಮಂದಿ ಇತರ ಧರ್ಮಗಳ ಸತ್ಯಗಳನ್ನಂತಿರಲಿ, ತಮ್ಮದೇ ಧರ್ಮದ ಸೌಂದರ್ಯವನ್ನೂ ಸರಿಯಾಗಿ ತಿಳಿದಿಲ್ಲ ವೆಂಬುದು ವಾಸ್ತವಿಕತೆಯಾಗಿದೆ. ಧರ್ಮದ ಹೆಸರಲ್ಲಿ ಗಲಭೆ, ಘರ್ಷಣೆ, ಕೊಲೆ ಸುಲಿಗೆಗಳ ಪ್ರಮಾಣವು ನಿರಂತರ ಏರುತ್ತಿರುವುದಕ್ಕೂ ಅದೇ ಕಾರಣವಾಗಿದೆ. ಮನದಲ್ಲಿ ಉಜ್ವಲ ಬೆಳಕು ಬೀರಿ ಒಳಿತಿನ ವೃಂದಾವನವನ್ನು ಸೃಷ್ಟಿಸಬೇಕಾಗಿದ್ದ ಧರ್ಮವು ಕೇವಲ ಬಾಹ್ಯ ಆವೇಶಗಳಿಗೆ ಸೀಮಿತವಾಗಿರುವುದರಿಂದ ಉನ್ನತ ವ್ಯಕ್ತಿತ್ವ ಮತ್ತು ಸಾಮಾಜಿಕ ಜೀವನದ ನಿರ್ಮಾಣ ಅಸಾಧ್ಯವಾಗುತ್ತಿದೆ. ಆದ್ದರಿಂದ ಪ್ರತಿಯೊಬ್ಬ ಧರ್ಮವಿಶ್ವಾಸಿಯು ಮೊತ್ತಮೊದಲು ತನ್ನ ಧರ್ಮದ ಗಾಢ ಅಧ್ಯಯನ ನಡೆಸಬೇಕು. ಅನಂತರ ತಾನು ಅನ್ಯವೆಂದು ಭಾವಿಸುವ ಧರ್ಮವನ್ನೂ ಅದೇ ರೀತಿ ಕಲಿಯಬೇಕು. ಈ ಕುರಿತು ವಿವಿಧ ಧರ್ಮೀಯರು ಪರಸ್ಪರ ಸೌಹಾರ್ದ ವಾತಾವರಣ ದಲ್ಲಿ ಚರ್ಚಿಸಬೇಕು. ಆಗ ಹೃದಯಗಳು ಹತ್ತಿರವಾಗುವುದು. ಹಾಗಾದರೆ ಸಹಜ ವಾಗಿ ಆತನ ಸಂಶಯ, ಹಗೆತನ, ತಪ್ಪು ತಿಳುವಳಿಕೆ ಕರಗಿ ಹೋಗುತ್ತದೆ. ಅದಕ್ಕಾಗಿ ಅತ್ಯಧಿಕ ಅವಕಾಶಗಳನ್ನು ಒದಗಿಸುವುದೇ ಸಮಾಜ ಮತ್ತು ರಾಷ್ಟ್ರಕ್ಕೆ ನಾವು ಸಲ್ಲಿಸಬಹುದಾದ ಮಹಾ ಸೇವೆಯಾಗಿದೆ.

ಎಲ್ಲ ಧರ್ಮಗಳಲ್ಲಿಯೂ ಶುದ್ಧ ಸ್ವಭಾವ ಮತ್ತು ಗ್ರಾಹಕ ಸ್ವಭಾವವನ್ನು ಬೆಳೆಸಿಕೊಂಡ ಅನುಯಾಯಿಗಳಿದ್ದಾರೆ. ಧರ್ಮವನ್ನು ಶುದ್ಧ ಸ್ವಭಾವದಲ್ಲಿ ಮೈಗೂಡಿಸಿ ಕೊಂಡವರ ಮಟ್ಟಿಗೆ ಧರ್ಮವು ವೈರಿಯ ತಾಣವಲ್ಲ. ಅದು ಪರಧರ್ಮದ ಸೌಂದರ್ಯ ಧಾರೆಯಾಗಿದೆ. ಅದೇ ವೇಳೆ ಅಧ್ಯಯನ ಮತ್ತು ಅನುಭವವು ಆತನನ್ನು ನಿರ್ದಿಷ್ಟ ಧರ್ಮದಲ್ಲಿ ವಿಶ್ವಾಸವಿರಿಸುವಂತೆ ಪ್ರೇರೇಪಿಸಿದೆ. ಪರಧರ್ಮದಲ್ಲಿ ವಿಶ್ವಾಸ ವಿರಿಸಿ ಅದರಂತೆ ಬಾಳುವ ಇತರರ ಹಕ್ಕುಗಳಿಗಾಗಿ ಆತನು ಜೀವನದಾದ್ಯಂತ ಹೋರಾಟ

ನಡೆಸುತ್ತಾನೆ. ಈ ರೀತಿ ಶುದ್ಧ ಸಂಸ್ಕೃತಿಗಳು ಬೆಳೆದು ಸಮೃದ್ಧಿಯುಂಟಾಗುತ್ತದೆ. ಧರ್ಮವು ಮಾನವನ ಅಂತರಂಗದಲ್ಲಿ ಸುಪ್ತವಾಗಿರುವ ಪ್ರಬಲ ಭಾವನೆಯೆಂದು ಮನಗಂಡ ಕೆಲವರು ಅದರ ದುರ್ಲಾಭ ಪಡೆಯುತ್ತಿದ್ದಾರೆ. ಅವರನ್ನು ಎದುರಿಸಿ ಅವರ ತಂತ್ರಗಳನ್ನು ತಡೆಯಲು ಶುದ್ಧ ಸ್ವಭಾವಗಳಿಂದ ಸಾಧ್ಯವಿದೆ. ಅದಕ್ಕಾಗಿ ಎಲ್ಲ ಧರ್ಮದಲ್ಲಿರುವ ಶುದ್ಧ ಸ್ವಭಾವಿಗಳ ಒಂದು ಒಕ್ಕೂಟವು ನಿರ್ಮಾಣವಾಗಬೇಕು. ಶುದ್ಧ ಸ್ವಭಾವದ ಈ ಮಂದಿ ಪರಸ್ಪರರ ಧರ್ಮವನ್ನು ಚೆನ್ನಾಗಿ ಕಲಿಯಬೇಕು. ಜಾತೀಯತೆ, ಕೋಮುವಾದ ಮತ್ತು ಮತಾಂಧತೆ ತಲೆಯೆತ್ತುವ ಎಲ್ಲ ಕಡೆಗಳಿಗೂ ಈ ಶುದ್ಧ ಧರ್ಮ ಸ್ವಭಾವದವರು ಶಾಂತಿ ಸ್ಥಾಪಿಸುವ ಯೋಧರಂತೆ ಧಾವಿಸಿ ಹೋಗಿ ಕೆಲಸ ಮಾಡಬೇಕು. ಜಾತ್ಯತೀತತೆಯನ್ನು ಬಹಳ ಪ್ರಾಮಾಣಿಕ ಮತ್ತು ಪರಿಶುದ್ಧವೆಂದು ಸ್ವೀಕರಿಸಿದವರೂ ನಮ್ಮ ಮಧ್ಯೆ ಇದ್ದಾರೆ. ಶುದ್ಧ ಧರ್ಮ ಸ್ವಭಾವದವರು ಮತ್ತು ಇವರು ಈ ವಿಷಯದಲ್ಲಿ ಪರಸ್ಪರ ಸಹಾಯ ಸಹಕಾರಗಳಿಂದ ಸಕ್ರಿಯರಾಗಬೇಕು.

ಓರ್ವ ಮುಸ್ಲಿಮನು ಪವಿತ್ರ ಕುರ್‌ಆನನ್ನು ಆಳವಾಗಿ ಅಭ್ಯಸಿಸುವಂತೆಯೇ, ಇತರ ಧರ್ಮಗ್ರಂಥಗಳನ್ನೂ ಕಲಿಯಬೇಕು. ಇತರ ಧರ್ಮೀಯರು ಅದೇ ವಿಧಾನವನ್ನು ಅನುಸರಿಸಬೇಕು. ಧರ್ಮವನ್ನು ದುರುಪಯೋಗಿಸಿ ಅದನ್ನು ಶೋಷಕ ಉಪಕರಣವನ್ನಾಗಿ ಮಾಡುವ ಕುತಂತ್ರಗಳನ್ನು ಸೋಲಿಸಲು ಶುದ್ಧ ಧರ್ಮ ವಿಶ್ವಾಸಿಗಳು ಮತ್ತು ಜಾತ್ಯತೀತರ ಒಕ್ಕೂಟಗಳಿಗೆ ಸಾಧ್ಯವಾಗಬೇಕು. ಅವು ಈ ಬಗ್ಗೆ ಜನಜಾಗೃತಿ ಮೂಡಿಸಬೇಕು. ಧರ್ಮಾಂಧತೆ, ಧಾರ್ಮಿಕ ಪೈಶಾಚಿಕತೆ ಮತ್ತು ಧಾರ್ಮಿಕ ರಾಕ್ಷಸೀಯತೆಯನ್ನು ಶುದ್ಧ ಧರ್ಮ ಮತ್ತು ಶುದ್ಧ ಜಾತ್ಯತೀತತೆಯಿಂದ ಪ್ರತಿರೋಧಿಸಲು ಸಾಧ್ಯವಿದೆ. ಒಟ್ಟಿನಲ್ಲಿ ಮಾನವನು ಮಾನವನನ್ನು ದ್ವೇಷಿಸುವ ಭಾರತವನ್ನು, ಮಾನವನು ಮಾನವನನ್ನು ಪ್ರೀತಿಸಿ ಬಲ ಪಡಿಸುವ ಭಾರತವನ್ನಾಗಿ ಮಾಡಲು ಧರ್ಮವನ್ನೇ ಬಳಸದೆ ಬೇರೆ ದಾರಿಯಿಲ್ಲ.